O.S.No.113/2014

DW-1

ಇಂದು ದಿನಾಂಕಃ23-02-2016 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ. ಆಯ್. ಸಿ. ಭೂತಿ ವಕೀಲರಿಂದ.

ನಮ್ಮ ಅಜ್ಜನ ಕಾಲದಿಂದಲೂ ಮದರಕಂಡಿಯಲ್ಲಿ ನಮ್ಮ ಮನೆಗಳು ಇರುವುದಿಲ್ಲ ಎಂದರೆ ಸರಿ. ನಮ್ಮ ಅಜ್ಜ ಮತ್ತು ಕಾಕಾರವರು ಮತ್ತು ದೊಡ್ಡಪ್ಪಂದಿರುಗಳು ಮದರಕಂಡಿಯಲ್ಲಿರುವ ಜಮೀನುಗಳಲ್ಲಿ ಗುಡಿಸಲು ಹಾಕಿಕೊಂಡ ವಾಸ್ತವ್ಯ ಮಾಡುತ್ತಿದ್ದರು ಎಂದರೆ ಸರಿ. ನಾನು ಮತ್ತು ಪ್ರೇಮಾ, ನಂದೇಶಾ ದಾನಪ್ಪ, ದಾನವ್ವ ಎಲ್ಲರೂ ಮದರಕಂಡಿಯ ಶಾಲೆಯಲ್ಲಿ ಕಲೆತಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಅವರ ತಂದೆ-ತಾಯಿಯವರ ಪಡಿತರ ಚೀಟಿ ಹಾಗೂ ಚುನಾವಣೆ ಗುರುತಿನ ಚೀಟಿಯನ್ನು ತೋರಿಸಿ ಸದರಿ ದಾಖಲೆಗಳು ನಿಮ್ಮ ತಂದೆ-ತಾಯಿಯವರಿಗೆ ಸೇರಿರುತ್ತವೆಯಾ ಎಂಬ ಪ್ರಶ್ನೆಗೆ ಅವುಗಳನ್ನು ನೋಡಿ ಅವುಗಳು ತಮ್ಮ ತಂದೆ ತಾಯಿಯವರದ್ದು ಎಂದು ಒಪ್ಪಿ ಕೊಂಡಿದ್ದರಿಂದ ಸಾಕ್ಷಿಯ ತಂದೆ ಮಹಾದೇವ ಪುಟಾಣಿ ಇವರ ಚುನಾವಣೆ ಗುರುತಿನ ಚೀಟಿಯನ್ನು ನಿಪಿಃ16 ಎಂದು ಗುರುತಿಸಲಾಯಿತು. 2 ನೇ ತಾಯಿ ಅಂಬವ್ವ ಪುಟಾಣಿ ಇವರ ಚುನಾವಣೆ ಗುರುತಿನ ಚೀಟಿಯನ್ನು ನಿಪಿಃ17 ಎಂದು ಗುರುತಿಸಲಾಯಿತು. ಸದರಿಯವರ ಪಡಿತನ ಚೀಟಿಯನ್ನು ನಿಪಿಃ18 ಎಂದು ಗುರುತಿಸಲಾಯಿತು.

ನಮ್ಮ ತಂದೆಯವರು ಜೀವಂತ ಇದ್ದಾಗ ನಾವು ಮತ್ತು ಅಂಬವ್ವ ಕೂಡಿಯೇ ವಾಸ ಮಾಡುತ್ತಿದ್ದೇವು ಎಂದರೆ ಸಾಕ್ಷಿಯು ವಾದಿಯರಾದ ಅಂಬವ್ವ ಮತ್ತು ಅವರ ಮಕ್ಕಳು ಮತ್ತು ತಮ್ಮ ತಂದೆ ಇವರು



ಮದರಕಂಡಿ ಗ್ರಾಮದ ಸರ್ವೇ ನಂ.45 ನಂಬರಿನ ತೋಟದಲ್ಲಿ ವಾಸವಾಗಿದ್ದರು ಎಂದು ನುಡಿದಿರುತ್ತಾರೆ.

ಸರ್ವೇ ನಂಬರ 45 ರಲ್ಲಿ ಸದರಿಯವರು ವಾಸ್ತವ್ಯ ಮಾಡಿರುತ್ತಾರೆಂದು ತಕರಾರನ್ನು ಕೊಟ್ಟಿಲ್ಲಾ. ವಾದಿಯರು ಇಂದಿಗೂ ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತಾರೆಂದರೆ ಸರಿ ಅಲ್ಲ. ನಮ್ಮ ತಂದೆ ಮತ್ತು ಅಂಬವ್ವ ಮತ್ತು ಅವರ ಮಕ್ಕಳು ತೇರದಾಳ, ಮುಗಳಖೋಡನಲ್ಲಿ ಖಾಯಂ ತರೀಖವಾಗಿ ವಾಸ ಮಾಡುತ್ತಿದ್ದರೆಂದು ನಾನು ನಮ್ಮ ವಕೀಲರಿಗೆ ಹೇಳಿ ತಕರಾರಿನಲ್ಲಿ ಬರೆಸಿರುತ್ತೇನೆ. ಆ ಬಗ್ಗೆ ನಾನು ದಾಖಲೆಗಳನ್ನು ಕೊಟ್ಟಿರುವುದಿಲ್ಲಾ.

ನಮ್ಮ ತಮ್ಮ ದಾನಪ್ಪ ಇವರು ಮರಣ ಹೊಂದುವ ವೇಳೆಯಲ್ಲಿ 22-23 ವಯಸ್ಸಿನವನಿದ್ದು ಆಗ ಅವರ ಮದುವೆಯಾಗಿರಲಿಲ್ಲ. ಅವರು ಜಮಖಂಡಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದರು. ಅವರ ಅಂತ್ಯಕ್ರಿಯೆಯನ್ನು ದಾವಾ ಆಸ್ತಿಯಲ್ಲಿ ಮಾಡಿರುತ್ತಾರೆ. ನನ್ನ ತಮ್ಮನು ಹೃದಯಾಘಾತದಿಂದ ಜಮಖಂಡಿಯ ಕೆ ಎಲ್ ಇ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ವಾದಿ ಅಂಬವ್ವ ನನ್ನ ತಂದೆಯ ವಾರಸುದಾರರು ಯಾರೆಂದು ವಂಶಾವಳಿಯಲ್ಲಿ ತೋರಿಸಿರುವ ಬಗ್ಗೆ ನನಗೆ ಗೊತ್ತಿಲ್ಲಾ. ನನ್ನ ಅಕ್ಕ ಮಹಾದೇವಿ ಇವರು 2-5-1991 ರಲ್ಲಿ ತೀರಿಕೊಂಡಿರುತ್ತಾಳೆ ಎಂದರೆ ಸರಿ. ನಮ್ಮ ತಂದೆಯವರಿಗೆ ನಾನು ಮತ್ತು ದಾನಪ್ಪ, ಅಂಬವ್ವ, ದಾನವ್ವ, ನಂದೇಶ, ಪ್ರೇಮಾ, ಇವರುಗಳನ್ನು ಹೊರತುಪಡಿಸಿ ಬೇರೆ ವಾರಸುದಾರರು ಇರುವುದಿಲ್ಲಾ. ದಾನಪ್ಪ ಮರಣಹೊಂದುವ 2-3 ತಿಂಗಳ ಹಿಂದೆ ದಾನಪ್ಪ ,

ಸುಬೆದಾರ ಅಂಬಲಿ ಅಂಗಡಿಯವರು ನಮ್ಮ ಹೊಲದಲ್ಲಿ ಟಿ ಸಿ ಹಾಕಿಸಲು ಹೆಸ್ಕಾಂ ಕ್ಕೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಆ ಕಾರಣಕ್ಕಾಗಿ ಮೃತ ದಾನಪ್ಪ ಸುಬೆದಾರ ಗೊವಿಂದ ಅಂಬಲಿ ಇವರುಗಳು ಡಿ ಡಿ ಮೂಲಕ ಒಟ್ಟು ಹಣ 29,831/- ಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ. ದಿಃ15-6-2012 ರಂದು ದಾನಪ್ಪನ ಹೆಸರಿನಲ್ಲಿ ಮಂಜುನಾಥ ಬೋರವೆಲ್ ತೆಗೆಸಿದ್ದನು ಎಂದರೆ ಸರಿ ಅಲ್ಲ. ಗ್ರಾಮ ಲೆಕ್ಕಾಧಿಕಾರಿ ಮದರಕಂಡಿಯವರು ಸರ್ವೇ ನಂ.144/3 ಅ ದಾವಾ ಆಸ್ತಿಯಲ್ಲಿ ಕೊಳವೆ ಭಾವಿ ಇರುತ್ತದೆ ಎಂದು ಮತ್ತ ಆದರಲ್ಲಿ ನೀರು ಇರುತ್ತದೆ ಎಂದು ಸದರಿ ಕೊಳವೆ ಭಾವಿಗೆ ವಿದ್ಯುತ್ ಪೂರೈಸಲು ಅಡ್ಡಿ ಇಲ್ಲ ಎಂದು ದಾಖಲಾ ಪತ್ರ ನೀಡಿರುತ್ತಾರೆ ಎಂದರೆ ಸರಿ. ಸದರಿ ದಾಖಲಾ ಪತ್ರವನ್ನು ನಿಪಿಃ19 ಎಂದು

ಗುರುತಿಸಲಾಯಿತು. ಹೆಸ್ಕಾಂ ಅರ್ಜಿಯನ್ನು ಕೊಡುವಾಗ ದಾವಾ ಆಸ್ತಿಯ ಉತಾರಿನಲ್ಲಿ ನಮ್ಮ ಅಜ್ಜಿಯ ಹೆಸರನ್ನು ಕಡಿಮೆ ಮಾಡಲಾಗಿತ್ತು ಎಂದರೆ ಸರಿ. ಸದರಿ ದಾವಾ ಆಸ್ತಿಯ ಉತಾರನ್ನು ನಿಪಿಃ20 ಎಂದು ಗುರುತಿಸಲಾಯಿತು. ದಾನಪ್ಪ ಪುಟಾಣಿ ಇವರು ನನಗೆ ದಾವಾ ಆಸ್ತಿ ಸರ್ವೆ ನಂ.144/3 ಅ ರಲ್ಲಿ ನೀರಾವರಿ ಮಾಡಿಕೊಳ್ಳುವ ಕುರಿತು ತಮ್ಮ ಹೆಸರಿನಲ್ಲಿ ಹೆಸ್ಕಾಂ ಜಮಖಂಡಿ ಇವರಿಂದ 5 ಎಚ್ ಪಿ ಪರವಾನಗಿ ಪಡೆದುಕೊಳ್ಳಲು ಮತ್ತು ಸದರಿ ಜಮೀನಿನಲ್ಲಿ ಹಾಯ್ದಾಡಲು ಹಾಗೂ ರಿಪೇರಿ ವಗೈರಿ ಮಾಡಿಕೊಳ್ಳಲು ತಮ್ಮ ಸಂಪೂರ್ಣ ಒಪ್ಪಿಗೆ ಇದೆ ಎಂದು ಯಾವುದೇ ರೀತಿಯ ತಂಟೆ ತಕರಾರು ಇಲ್ಲವೆಂದು ಕಬೂಲಾತಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿಃ21 ಎಂದು ಗುರುತಿಸಲಾಯಿತು. ಸದರಿ ಎಚ್ ಪಿ ಗೆ ಸಂಬಂಧಪಟ್ಟ ಕೆ ಇ ಬಿ ವಿದ್ಯುತ್ ಬಿಲ್ಲುಗಳನ್ನು ಪಾವತಿಸಿರುವುದನ್ನು ನೋಡಿ ಸಾಕ್ಷಿಯು ತಮ್ಮ ಹೆಸರಿನಲ್ಲಿ ದಾನಪ್ಪ ತುಂಬಿರುತ್ತಾರೆಂದು ನುಡಿದಿರುತ್ತಾರೆ ಸದರಿ ದಾಖಲೆಗಳನ್ನು ನಿಪಿಃ22 ರಿಂದ ನಿಪಿಃ32 ಎಂದು ಗುರುತಿಸಲಾಯಿತು. ದಾನಪ್ಪನ ಜೀವಿತ ಕಾಲಾವಧಿಯಲ್ಲಿ ನಾವು ಪಾಲುವಾಟ್ನಿ

-5-

ಮಾಡಿಕೊಂಡಿರುವುದಿಲ್ಲ. ದಾನಪ್ಪನು ಮರಣಹೊಂದುವ ಪೂರ್ವದಲ್ಲಿ ತನ್ನ ಹಿಸ್ಸಾದ ಹಕ್ಕನ್ನು ನನಗೆ ಬಿಟ್ಟು ಕೊಟ್ಟಿರುವುದಿಲ್ಲಾ. ದಾನಪ್ಪನ ಪಾಲು ನನಗೆ ಹಾಗೂ ವಾದಿಯರ ಪಾಲಿಗೂ ಬರುತ್ತದೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯಲ್ಲಿ ದಾನಪ್ಪನ ಪಾಲು ಇರುತ್ತದೆ ಎಂದು 4 ನೇ ಪ್ರತಿವಾದಿಗೆ ಮಾಹಿತಿ ಕೊಟ್ಟಿದ್ದೇನು. ನನ್ನ ಮತ್ತು 4 ನೇ ಪ್ರತಿವಾದಿ ಜಾತಿ ಬೇರೆ ಬೇರೆ ಇರುತ್ತವೆ. ದಾನಪ್ಪನ ಜೀವಿತಾವಧಿಯಲ್ಲಿ ಮೂರು ವರೆ ಲಕ್ಷ ರೂ.ಗಳ ಸಾಲವನ್ನು ಮುದರಡ್ಡಿ ಇವರು ನಮಗೆ ಕೊಟ್ಟಿದ್ದರು. ನನ್ನ ತಂದೆಯವರು 25000/- ಮತ್ತು ನನ್ನ ಮೃತ ತಮ್ಮ ದಾನಪ್ಪ ಇವರು 50,000/- ಯ ಪ್ರಾಮಿಸರಿ ನೋಟುಗಳನ್ನು 4 ನೇ ಪ್ರತಿವಾದಿ ಮುದರಡ್ಡಿ ಇವರಿಗೆ ಬರೆದು ಕೊಟ್ಟಿದ್ದರು. ಟಿ ಸಿ ಗೆ ಅರ್ಜಿ ನೀಡುವ ಪೂರ್ವದಲ್ಲಿ ನನ್ನ ತಮ್ಮ 50,000/- ಗಳ ಪ್ರಾಮಿಸರಿ ನೋಟನ್ನು 4 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದರು. ಬೀರಪ್ಪ ಧಳವಾಯಿ ಸಾಃ ಮದರಕಂಡಿಯವರಿಂದ ರೂ.50,000/- ಗಳ ಸಾಲವನ್ನು ನನ್ನ ತಮ್ಮನ ಹೆಸರಿನಲ್ಲಿ ಪಡೆದುಕೊಂಡಿದ್ದೇವು. ನಾನು ಬ್ಯಾಂಕಿನಲ್ಲಿ 30,000/-ಸಾಲ ತೆಗೆದುಕೊಂಡಿದ್ದು ಸದರಿ ಸಾಲವನ್ನು ನಾನು ತುಂಬದೇ ಇರುವುದರಿಂದ ಈಗ ಅದು ಒಂದು ಲಕ್ಷಕ್ಕಿಂತ ಮೇಲಾಗಿರುತ್ತದೆ. ಖರೀದಿ ದಿನದಂದು 4 ನೇ ಪ್ರತಿವಾದಿಯು ಹಿಂದಿನ ಸಾಲವನ್ನು ಮುರಿದುಕೊಂಡು ಎರಡು ಲಕ್ಷ ರೂ.ಗಳ ನಗದನ್ನು ಕೊಟ್ಟಿದ್ದು ಅದನ್ನು ನಮ್ಮ ತಾಯಿಯವರ ಹೆಸರಿನಲ್ಲಿ ಇಟ್ಟಿರುತ್ತೇವೆ. ನಾನು ನಮ್ಮ ವಕೀಲರಿಗೆ 4 ನೇ ಪ್ರತಿವಾದಿ ಖರಿದಿ ದಿನದಂದು ಎರಡುಲಕ್ಷ ರೂ.ಗಳನ್ನು ಕೊಟ್ಟಿದ್ದನು ಎಂದು ಹೇಳಿ ಬರೆಸಿರುವುದಿಲ್ಲಾ. ದಾವಾ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ನಾವು ಯಾವ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲಾ. ನಮ್ಮ ಕುಟುಂಬಕ್ಕೆ ಯಾವುದೇ ಹಣದ ಅಡಚಣೆ ಇರದಿದ್ದರೂ ಸಹ ವಾದಿಯರಿಗೆ ಪಾಲು ಕೊಡಬಾರದೆಂಬ ಉದ್ದೇಶದಿಂದ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದೇವು ಎಂದರೆ ಸರಿ ಅಲ್ಲ. ದಾವಾ ಆಸ್ತಿಯು ನೀರಾವರಿ ಜಮೀನಾಗಿರುವುದಿಲ್ಲ. ದಾವಾ ಆಸ್ತಿಯಲ್ಲಿ ಎರಡು ಬೋರಗಳನ್ನು ತೆಗೆಸಿರುವುದಿಲ್ಲಾ. ದಾವಾ ಆಸ್ತಿಯಲ್ಲಿ 4 ನೇ ಪ್ರತಿವಾದಿಗೆ ಕೊಡುವಾಗ ನೀರಾವರಿ ಜಮೀನಿದೆ ಎಂದು ಹೇಳಿಲ್ಲಾ ಹಾಗೂ ಭಾವಿ ಹಕ್ಕು ಇದೆ ಎಂದು ಹೇಳಿಲ್ಲಾ ಆ ಬಗ್ಗೆ ಅವರು ಕೇಳಿರುವುದಿಲ್ಲ. ಸದರಿ ಜಮೀನನ್ನು ಕುಷ್ಕಿ ಜಮೀನು ಎಂದು ಕೊಡಲಾಗಿದೆ. ನಾನು ನಮ್ಮ ತಕರಾರಿನಲ್ಲಿ ನಾನು ನಮ್ಮ ತಂದೆ ಮತ್ತು ನಮ್ಮ ತಮ್ಮ ಸಾಲ ಮಾಡಿದ್ದೇವು ಎಂದು ಹೇಳಿ ಬರೆಸಿಲ್ಲಾ. ದಾವಾ ಆಸ್ತಿಯನ್ನು ಖರೀದಿಗೆ ಕೊಡುವಾಗ ದಾವೆ ಮಾಡಿದರೆ ಅದಕ್ಕೆ ನಾವು ಜವಾಬ್ದಾರರಲ್ಲ ಎಂದು ಹೇಳಿರುವುದಿಲ್ಲಾ. ದಾವಾ ಆಸ್ತಿಯನ್ನು ಪಾಲು ಮಾಡುವಾಗ ನಮ್ಮ ಅಜ್ಜನಿಗೆ 3 ನೇ ಪ್ರತಿವಾದಿ ದಾನವ್ವ ಜೀವಂತ ಇದ್ದ ಬಗ್ಗೆ ಗೊತ್ತಿತ್ತು ಆದರೆ ಪಾಲು ಕೊಡಲಿಲ್ಲ ಎಂದರೆ ಆಗ ಆಸ್ತಿಯಲ್ಲಿ ಹೆಣುಮಕ್ಕಳಿಗೆ ಪಾಲು ಇರಲಿಲ್ಲಾ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಕೊಡುವ ಪೂರ್ವದಲ್ಲಿ ಎಸ್ ಆರ್ ಎಸ್ ಬೋರವೆಲ್ಲ ಜಮಖಂಡಿಯವರಿಂದ 4 ನೇ ಪ್ರತಿವಾದಿ ಬೋರವೆಲ್ ಹಾಕಿಸಿರುವುದಿಲ್ಲ. ಖರೀದಿ ಪತ್ರವನ್ನು ಬರೆಯಲು

ಮಾಹಿತಿಯನ್ನು 4 ನೇ ಪ್ರತಿವಾದಿಯವರೇ ಮಾಹಿತಿ ನೀಡಿರುತ್ತಾರೆ. ಸದರಿ ಖರೀದಿ ಪತ್ರವನ್ನು ಓದಿ ಸಹಿ ಮಾಡಿರುತ್ತೇನೆ. ಯಾರಾದರೂ ಯಾವುದಾದರೂ ಬಾಂಡನ್ನು ಕೊಟ್ಟಾಗ ಓದಿ ಸಹಿ ಮಾಡುತ್ತೀಯಾ ಹಾಗೆ ಸಹಿ ಮಾಡುತ್ತೀಯಾ ಎಂದರೆ ಸಾಕ್ಷಿಯು ಅವರು ಹೇಗೆ ಹೇಳುತ್ತಾರೆ ಹಾಗೆ ಸಹಿ ಮಾಡುತ್ತೇನೆಂದು ನುಡಿಯುತ್ತಾರೆ. 4 ನೇ ಪ್ರತಿವಾದಿ ಖರೀದಿ ಪಡೆಯುವ ಪೂರ್ವದಲ್ಲಿ ಬೋರವೆಲ್ ಹಕ್ಕು ಮತ್ತು



ನೀರಿನ ಹಕ್ಕು ಟಿ ಸಿ ಹಕ್ಕು ತಿಳಿದಿತ್ತು ಎಂದರೆ ಸರಿ ಅಲ್ಲ. ದಾವಾ ಆಸ್ತಿ ಖರೀದಿ ಮಾಡಿದ ನಂತರ ನನ್ನನ್ನು ಮತ್ತು ವಾದಿಯರನ್ನು ಮತ್ತು ಅವರ ಕಾಕಾರವರನ್ನು ಮತ್ತು ಮದರಕಂಡಿಯ ಹಿರಿಯರಾದ ಕರಿಯಪ್ಪ ಜೊಂಗಣ್ಣನವರ ಹಟ್ಟಿ ಮತ್ತು ಕಂಕನವಾಡಿ ಕಡಿವಾಳ ಇವರನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ.ನಿಪಿ:13 ಕ್ಕೆ ಖಾಲಿ ಬಾಂಡ ಇದ್ದು ಇವರೆಲ್ಲ ಹಿರಿಯರು ಕೂಡಿಕೊಂಡು ನನ್ನ ಸಹಿಯನ್ನು ಪಡೆದಿರುತ್ತಾರೆಂದು ನಾನು ದೂರನ್ನು ನೀಡಿರುವುದಿಲ್ಲಾ. ಏಕೆಂದರೆ ಆಗ ನನಗೆ ಗೊತ್ತಿರಲಿಲ್ಲಾ. ಖಾಲಿ ಬಾಂಡಿಗೆ ನನ್ನ ಸಹಿ ಪಡೆದಿರುತ್ತಾರೆಂದು ವಕೀಲರಿಗೆ ಹೇಳಿರುತ್ತೇನೆ. ಖರೀದಿ ಪತ್ರ , ಬಾಂಡ ಪತ್ರ ಮತ್ತು ನಿಪಿ:13 ರ ದಾಖಲೆಗಳನ್ನು ಜಮಖಂಡಿಯಲ್ಲಿ ಬರೆಸಿರುತ್ತಾರೆ ಎಂದರೆ ಸರಿ ಅಲ್ಲ. ನಿಪಿ:13 ರ ಬಾಂಡನ್ನು ನಾನು ತೆಗೆದುಕೊಂಡು ಬಂದಿಲ್ಲಾ. ಆದರೆ ದಾನವ್ವ ಬರೆದುಕೊಟ್ಟ ಒಪ್ಪಿಗೆ ಪತ್ರವನ್ನು ನಾನು ತಂದಿರುತ್ತೇನೆ. ಆ ಮೇಲೆ ಹೇಳಿದ ಪತ್ರಗಳಿಗೆ ನಾನೇ ಮಾಹಿತಿ ಕೊಟ್ಟು ಹೇಳಿ ಬರೆಸಿರುತ್ತೇನೆಂದರೆ ಸರಿ ಅಲ್ಲ.4 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಖರೀದಿ ಮಾಡುವ ವೇಳೆಯಲ್ಲಿ ಹಿರಿಯರು ನಿಪಿ:13 ರ ಖಾಲಿ ಬಾಂಡಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆಂದು ಹೇಳಿರುವುದಿಲ್ಲ.ದಾವಾ ಆಸ್ತಿ ಖರೀದಿಯಾಗುವ ಪೂರ್ವದಲ್ಲಿ ಕರಾರು ಪತ್ರ ಆಗಿರುವುದಿಲ್ಲಾ. ನಿಪಿ:11 ರಲ್ಲಿ ನಾನು ಮತ್ತು ದಾನವ್ವ ಮಾತ್ರ ನಮ್ಮ ತಂದೆಗೆ ವಾರಸುದಾರರು ಎಂದು ಸುಳ್ಳು ಹೇಳಿ ಬರೆಸಿದ್ದೇನೆಂದರೆ ಸರಿ ಅಲ್ಲ.

ಡ ನಮೂದ ನಂ.5644 ನೇದ್ದರಲ್ಲಿ ಬಾಯಿ ಮಾತಿನ ಪಾಲು ವಾಟ್ನಿ ಆಗಿದೆ ಎಂದು ಬರೆಸಿದ ಬಗ್ಗೆ ನನಗೆ ಗೊತ್ತಿಲ್ಲಾ. ಬಾಯಿಮಾತಿನಪಾಲು ವಾಟ್ನಿ ಆಗಿತ್ತು ಎಂದು ನನ್ನ ಸಾಕ್ಷ್ಯ ಆಗುವ ವೇಳೆಯಲ್ಲಿ ಮತ್ತು ದಾವೆಗೆ ತಕರಾರು ಹಾಕುವ ವೇಳೆಯಲ್ಲಿ ಹೇಳಿರುತ್ತೇನೆ. ನಮ್ಮ ಅಜ್ಜನ ಕಾಲದಲ್ಲಿ ಬಾಯಿ ಮಾತಿನ ಪಾಲು ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ ಅಲ್ಲ. ಮುಗಳಖೋಡನಲ್ಲಿ 13 ಎಕರೆ 11 ಗುಂಟೆ ತೇರದಾಳನಲ್ಲಿ ನಾಲ್ಕು ಎಕರೆ ಜಮೀನು ನಮ್ಮ ಅಜ್ಜನ ಹೆಸರಿನಲ್ಲಿ ಇಂದಿಗೂ ಇರುತ್ತದೆ ಎಂದರೆ ಸರಿ. ಆ ಬಗೆಗ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲ.ತೇರದಾಳನ ಆರ್ ಟಿ ಎಸ್ ರಾಜೀಯಾಗುವ ವೇಳೆಯಲ್ಲಿ 3 ನೇ ವ್ಯಕ್ತಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಬೇಡ ಎಂದು ಹೇಳಿರುವುದಿಲ್ಲ. ನಮ್ಮ ತಂದೆ ಮಹಾದೇವ ಇವರಿಗೆ ಮುಗಳಖೋಡನಲ್ಲಿ ಆಸ್ತಿ ಬಂದಿರುತ್ತದೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಬಾಯಿ ಮಾತಿನಲ್ಲಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ನಮ್ಮ ಅಜ್ಜ ಪಾಲು ಆಗುವಾಗ ನಮ್ಮ ತಂದೆಗೆ ದಾವಾ ಆಸ್ತಿ ಪಾಲಾದ ಬಗ್ಗೆ ನನಗೆ ಹೇಳಿರುತ್ತಾರೆ. ನಮ್ಮ ತಂದೆಯವರಿಗೆ ಹೊಲ ಇರದೇ ಇರುವುದರಿಂದ ನಮ್ಮ ಅಜ್ಜನವರು ನಮ್ಮ ತಂದೆಗೆ ಆಸ್ತಿ ಕೊಟ್ಟಿದ್ದನು ಎಂದರೆ ಸರಿ ಅಲ್ಲ. ಇಂದಿನವರೆಗೂ ಯಾವುದೇ ಆಸ್ತಿಯಲ್ಲಿ ವಾದಿಯರಿಗೆ ಪಾಲು ಕೊಟ್ಟಿಲ್ಲ ಎಂದರೆ ಸರಿ. ವಾದಿಯು ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ತಮ್ಮದು ಯಾವುದೇ ಪಾಲು ಇಲ್ಲಾ ಎಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾತ್ರ ದಾವೆ ಮಾಡಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿಗೆ ನಮ್ಮ ತಂದೆಯವರಿಗೆ ಬೇರೆ ಜಮೀನು ಇದೆ ಎಂದು ದಾಖಲೆಯನ್ನು ತೋರಿಸಿರುತ್ತೇನೆ. ನನ್ನ ತಂದೆ ತೀರಿಕೊಂಡ ನಂತರ ನನ್ನನ್ನು ಹಾಗೂ ದಾನವ್ವ ಮತ್ತು ದಾನಪ್ಪರವರನ್ನು ವಾರಸುದಾರರು ಎಂದು ಮುಗಳಖೋಡ ಮತ್ತು ತೇರದಾಳ ಆಸ್ತಿಗೆ ಸೇರಿಸಬೇಕೆಂದು ಅರ್ಜಿ

ಕೊಟ್ಟಿದ್ದೇವು. ಆ ಅರ್ಜಿಯನ್ನು ನಕಲನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ನನಗೆ ಸಾಧ್ಯವಾಗುವುದಿಲ್ಲ. ನಮ್ಮ ಜೊತೆ ಮದರಕಂಡಿಯ ಹಿರಿಯರಾದ ಕಂಕನವಾಡಿ ಕಡಿವಾಳ ಮತ್ತು ಹಟ್ಟಿ ಮತ್ತು ಜೊಂಗನವರ ಇವರ ಜೊತೆ ವೈರತ್ವ ಇರುವುದಿಲ್ಲಾ. ತೇರದಾಳ ಆಸ್ತಿಗೆ ಸಂಬಂಧಪಟ್ಟಂತೆ 4 ನೇ ಪ್ರತಿವಾದಿ ಅಣ್ಣ ಹಿರಿತನ ಮಾಡಿರುವುದಿಲ್ಲ. ವಾದಿಯರಿಗೆ ಪಾಲು ಕೊಡವುದು ಬರುತ್ತದೆ ಎಂದು ಆಸ್ತಿಯಲ್ಲಿ ಬೋರ ಮತ್ತು ಟಿ ಸಿ ಹಕ್ಕು ಇಲ್ಲ ಎಂದು ಹೇಳುತ್ತಿದೆದೇನೆಂದರೆ ಸರಿ ಅಲ್ಲ. ನನಗಾಗಲಿ ನಮ್ಮ ಕುಟುಂಬಕ್ಕಾಗಲಿ ಹಣಕಾಸಿನ ತೊಂದರೆ ಇರದಿದ್ದರೂ ಸಹ ವಾದಿಯರಿಗೆ ಪಾಲು ಸಿಗಬಾರದೆಂದು ಮಾರಾಟ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

ಮರುವಿಚಾರಣೆಃಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಹಾಗೂ ಜೆ ಎಂ ಎಫ್ ಸಿ ಜಮಖಂಡಿ.

ಸಾಕ್ಷಿಯ ಸಹಿ,